Reg No B G 155

17 2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಆನರರಿ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಳಗಾಂನಲ್ಲಿ ಪ್ರತಿಬಂಧಕಾಜ್ಞೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕಿನ್ನಾಯರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಫಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪರಿಹಾರ ಕಾರ್ಯಕ್ಕೆ

ಬಿಜಾಪುರ — ರಾಜ್ಯದಲ್ಲಿ ಪರಿಹಾರ ಕಾರ್ಯಗಳಿಗೆ ಕೇಂದ್ರ ಈಚೆಗೆ ನಿಗದಿ ಮಾಡಿರುವ ರೂ. 4 ಕೋಟಿ ಜೊತೆಗೆ ಇನ್ನೂ ರೂ. 2 ಕೋಟಿ ಬೇಕಾಗಿದೆ ಎಂದು ಕಂದಾಯ ಮಂತ್ರಿ ಶ್ರೀ ಚೌಹ್ಲಿಯವರು ಹೇಳಿದರು.

ಕನ್ನಡ ಚಳವಳಿಗಾರರು

ಬೆಂಗಳೂರು— ಕೇಂದ್ರವು ಮಹಾಜನ ಕಮಿಷನ್ ವರದಿಯನ್ನು ಪೂರ್ಣವಾಗಿ ಜಾರಿಗೆ ತರುವಂತೆ ಒತ್ತಾಯ ಮಾಡಲು ಕನ್ನಡ ಚಳುವಳಿಗಾರರು ರಾಜ್ಯಾದ್ಯಂತ ಜಿಲ್ಲಾ ವಳ ಹೊಡುವರೆಂದು ಶ್ರೀ ವಾಟಾಲ್ ನಾಗರಾಜರು ಹೇಳಿದರು - ಇದರ ಉದ್ಘಾಟನೆ ದಿನ - ತಾ || 23 ರಂದು ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆ ನಡೆಸಿ ಚಿಕ್ಕಲಾಲ್‌ಬಾಗ್‌ನಲ್ಲಿ ಭಾರತ ಗೃಹ ಮಂತ್ರಿ ಚವ್ಹಣ್ ಮತ್ತು ಶಿವಸೇನಾ ನಾಯಕರ ಪ್ರತಿರೂಪುಪು ದಹಿಸಲಾಗುವುದು.

○

ಬಂಧನ

ಪೂನಾ— ಶನಿವಾರ ಒಂದು ಮುನಿಸಿಪಲ್ ವಾಹನವು ಸುಡಲ್ಪಟ್ಟ ಸಂಬಂಧವಾಗಿ 175 ಮಂದಿ ಬಂಧಿಸಲ್ಪಟ್ಟರು.

●

ಬಜೆಟ್

ಬೆಂಗಳೂರು— ಮೈಸೂರು ಬಜೆಟ್ ತಾ|| 24 ರಂದು ಎರಡು ಶಾಸನಸಭೆಗಳಲ್ಲೂ ಮಂಡಿಸಲಾಗುವುದು.

★

ಚಿಕ್ಕಕಾರು— ವರ್ಷಕ್ಕೆ 12000 ಚಿಕ್ಕ ಕಾರುಗಳನ್ನು ತಯಾರಿಸಬಲ್ಲ ಮೋಟಾರು ಯಂತ್ರಾಗಾರವನ್ನು ಒಂದು ಜಿಲ್ಲಾ ಸಂಸ್ಥೆಗೆ ಉದಾರ ದಾನವಾಗಿ ಕೊಡಲು ಆಸ್ಟ್ರೇಲಿಯಾದ ಜೋಟಾ ಸಂಸ್ಥೆ ತಿಳಿಸಿದೆ ಇದು ರೂ. 50 ಲೆಯದು.

★ಟೋಕಿಯೊ— ವಿಶ್ವದಲ್ಲಿ ಅತಿ ಹೊಡ್ಡದಾದ ಉಕ್ಕಿನ ಗಿರಣಿಯು ಸ್ಥಿತಿ ಕಾರ್ಯಾರಂಭಮಾಡಿತು — ಇದು ವರ್ಷಕ್ಕೆ 85 ಲಕ್ಷ ಟನ್ ಕಚ್ಚಾ ಉಕ್ಕನ್ನು ಉತ್ಪಾದಿಸುವ ಶಕ್ತಿ ಹೊಂದಿದೆ.

ಇಬ್ಬರಿಗೂ 3 ನೇ ಮದುವೆ

ಮೆಲ್ಬೋರ್ನ್— ಕಳೆದ ಡಿಸೆಂಬರಿನಲ್ಲಿ ಸುದ್ದಿಪತ್ರ ಮುಳುಗಿ ಕಾಣೆಯಾದ ಆಸ್ಟ್ರೇಲಿಯಾ ಪ್ರಧಾನಿ ಹೆರಾಲ್ಡ್ ಹೋಲ್ಟ್‌ರ ವಿಧವೆ ಜಾರ್ಜಾ. ಕ್ವೀರಕೇಂದ್ರದ ಮಾಲೀಕನೊಬ್ಬನನ್ನು ವರಿಸುವಳು — ಇಬ್ಬರಿಗೂ ಇದು 3 ನೇ ಮದುವೆ !

○

ಶಿವಸೇನಾ ಹಾವಳಿಯಿಂದ

ಬೊಂಬಾಯಿ— ಗಲಭೆ ಸಂದರ್ಭದಲ್ಲಿ ಬೊಂಬಾಯಿನ 57 ಹೋಟಲುಗಳು ನಾಶವಾಗಿ ರೂ. 50 ಲಕ್ಷದಷ್ಟು ನಷ್ಟವಾಗಿದೆ

○

ಪ್ರತಿಭಟನೆ

ನವದೆಹಲಿ— ರಷ್ಯಾ ರಾಯಭಾರಿ ಕಛೇರಿಯ ಮುಂದೆ, ಭಾರತದ ವಿಷಯದಲ್ಲಿ ಅದರ ಕೈವಾಡ ಪ್ರತಿಭಟಿಸಿ ಜನಸಂಘ ಪ್ರದರ್ಶನ ನಡೆಸಿ ಸಾಮೂಹಿಕ ಸಭೆಯನ್ನೂ ನಡೆಸಲಾಯಿತು.

★

ಅಣ್ಣಾ ಸ್ಮಾರಕ ದಿನ

ಮದರಾಸು— ನಿನ್ನೆ "ಅಣ್ಣಾ ಸ್ಮಾರಕ ದಿನ" ದಂದು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು, ಮಂತ್ರಿಗಳು ಶಾಸಕರಿಂದ ಕೂಡಿದ 30000 ಮಂದಿಯೊಡನೆ ಅಣ್ಣಾ ಸಮಾಧಿಗೆ ಭೇಟಿ ಕೊಟ್ಟು ಪುಷ್ಪ ಅರ್ಪಿಸಿದರು.

ಅವಕ್ಕೆ ಮೊದಲು ಮಾಜಿ ಮುಖ್ಯಮಂತ್ರಿ ನಡುಂಚೇಳಿಯರ್ 10000 ಮಂದಿಯೊಡನೆ ಮೌನ ಮೆರವಣಿಗೆಯಲ್ಲಿ ಹೋಗಿ ಪುಷ್ಪ ಅರ್ಪಿಸಿದರು.

ರಾಜ್ಯಾದ್ಯಂತ ಹೀಗೆ ಮೌನ ಮೆರವಣಿಗೆಗಳು ನಡೆದವು.

ಮಧುಗಿರಿ ಘಟನೆ

ಬೆಂಗಳೂರು— ಮಧುಗಿರಿ ಘಟನೆ ಸಂಬಂಧ ನರೋನಾ ಕಮಿಷನ್ ವರದಿಯು ಶನಿವಾರ ಸರಕಾರಕ್ಕೆ ತಲುಪಿಸಲಾಯಿತು.

ಪ್ರತಿಬಂಧಾಜ್ಞೆ

ಬೆಳಗಾಂ— 5 ದಿನಗಳ ಕಾಲ ಮೆರವಣಿಗೆ ಸಭೆ ಇತ್ಯಾದಿ ಪ್ರತಿಬಂಧಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ— ಭೇಟಿ ಕೊಡಲಿರುವ ಕಾಂಗ್ರೆಸ್ ಅಧ್ಯಕ್ಷರು ಮತ್ತು ಮಂತ್ರಿಗಳ ವಿರುದ್ಧ ಮಹಾರಾಷ್ಟ್ರ ಏಕೀಕರಣ ಸಮಿತಿ ಕಪ್ಪು ಬಾವುಟ ಪ್ರದರ್ಶನ ಏರ್ಪಡಿಸಿತ್ತು.

ಶ್ರೀ ದ್ವಾರಕಾ ಜಗದ್ಗುರುಗಳವರು

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು ದೂರ್ವಾಸಪುರದ ಮಠಕ್ಕೆ ಆಗಮಿಸಿರುವರೆಂದಾಗಿ ತಿಳಿಯಬಂದಿದೆ.

ಹಸು ಎಮ್ಮೆ ಕಳ್ಳರು

ತರೀಕೆರೆ— ರೂ. 8000 ಬೆಲೆಯ ಹಸು ಮತ್ತು ಎಮ್ಮೆಗಳನ್ನು ಕದ್ದ ಆಪಾದನೆಗಾಗಿ ಕೆಂಚುಂಡಪ್ಪ, ಇಮಾಂಸಾಬ್, ಹುಸೇನ್‌ಸಾಬಿಯವರಿಗೆ ತಲಾ 1 ವರ್ಷ ಕಠಿಣ ಸಜಾ ವಿಧಿಸಲಾಯಿತು.

ಮರದಿಂದ ಇಳಿದರು

ಕಲ್ಲೀಕೋಟೆ— ಕನ್ಹನಗಾಡ್ ನಿತ್ಯಾನಂದ ಆಶ್ರಮದ ಸ್ವಾಮಿ ಆತ್ಮಾನಂದರು ಕಳೆದ ಡಿಸೆಂಬರು 22 ರಂದು 'ಮೌನವ್ಯಸನ' ಕ್ಕಾಗಿ ಒಂದು ಗೇರುಮೊಪ್ಪು ಮರವನ್ನು ಹತ್ತಿ ಕುಳಿತಿದ್ದವರು ಶನಿವಾರ ಕೆಳಕ್ಕೆ ಇಳಿದುಬಂದರು.

ಎಲ್ ಐ ಸಿ

ನವದೆಹಲಿ— ಜನವರಿಯಲ್ಲಿ ಎಲ್ ಐ ಸಿ ಹೊಸ ವಹಿವಾಟು ರೂ. 51.88 ಕೋಟಿಗಳಷ್ಟಾಗಿದೆಯೆಂದು ಪ್ರಕಟವಾಗಿದೆ.

ರಾಮಾಯಣ ದರ್ಶನ ಗ್ರಂಥ

ಮೈಸೂರು— ವಿದ್ಯಾರ್ಥಿಗಳು ಏರ್ಪಡಿಸಿದ್ದ ಮಹಾಕವಿ ಶ್ರೀ ಕುವೆಂಪುರವರ ರಾಮಾಯಣ ದರ್ಶನ ಮಹಾಕಾವ್ಯದ ವೈಭವ ಮೆರವಣಿಗೆ ಏರ್ಪಡಿಸಲಾಗಿತ್ತು ; ಸಹಸ್ರಾರು ಮಂದಿ ವಿದ್ಯಾರ್ಥಿಗಳೂ ಸಾರ್ವಜನಿಕರೂ ಭಾಗವಹಿಸಿದ್ದರು.

ಅಯೂಬರ ವಿರೋಧಿಗಳು

ಕರಾಚಿ— ಅಯೂಬರ ವಿರೋಧಿಗಳು ಅವರೊಡನೆ ಬುಧವಾರ ಮಾತುಕತೆ ನಡೆಸಲು ಒಪ್ಪಿರುವರು.

ಪಂಚ ಮಾತೆಯರು

ಭೂಮಾತೆ, ದೇಶಮಾತೆ, ದೇಹಮಾತೆ, ವೇದಮಾತೆ, ಗೋಮಾತೆ, ಈ ಐದು ಮಾತೆಯರು ಭಾರತೀಯರಿಗೆ ಪಂಚಪ್ರಾಣಗಳಂತೆ ಬಹು ಮುಖ್ಯವಾದವರು. "ಮಾತೃದೇವೋಭವ" ಎನ್ನುವುದೇ ಉಪನಿಷತ್ತುಗಳು ಉಪದೇಶಿಸುವ ಮೊಟ್ಟ ಮೊದಲ ಕರ್ತವ್ಯ. ಮಾತಾ-ಪಿತೃಗಳಿಗೆ ಸೇವೆ ಮಾಡದ, ಗುರುವನ್ನು ಆದರಿಸದ ಭಾರತೀಯರು ಭಾರತಕ್ಕೇ ಅಪಕೀರ್ತಿ ತರುವ ದ್ರೋಹಿ ಎನ್ನಬಹುದು. ನಮ್ಮ ಧರ್ಮಶಾಸ್ತ್ರಗಳು ಸ್ತ್ರೀಯರಿಗೆ ಅತ್ಯುತ್ತಮ ಸ್ಥಾನ ಕೊಡಬೇಕೆಂದು ಆದೇಶಿಸುತ್ತವೆ. ಸೀತಾರಾಮ, ರಾಧಾಕೃಷ್ಣ, ಗೌರಿಶಂಕರ ಮುಂತಾಗಿ ದೇವರ ಹೆಸರುಗಳಲ್ಲೂ ಕೂಡ ಸತಿಯ ಹೆಸರು ಮೊದಲು ಇರುವುದು ಕಂಡುಬರುತ್ತದೆ. ಸ್ತ್ರೀ ಗೃಹಲಕ್ಷ್ಮಿ, ಧರ್ಮಪತ್ನಿ. ದೇಶೋನ್ನತಿ ಸಾಧಿಸುವ ಮುಂದಿನ ಜನಾಂಗವನ್ನು ತಿದ್ದುವ ಜವಾಬ್ದಾರಿ ಸ್ತ್ರೀಯರದೇ .... ಆದುದರಿಂದ ಇಂದಿನ ವಿದ್ಯಾಭ್ಯಾಸ ಸ್ತ್ರೀಯರನ್ನು ಒಳ್ಳೆಯ ಹೆಂಡತಿಯರನ್ನಾಗಿ ತಯಾರು ಮಾಡುತ್ತಿರಬಹುದೇ ಹೊರತು, ಒಳ್ಳೆಯ "ಮಾತೆ" ಯರನ್ನಾಗಿ ಮಾತ್ರ ತಯಾರುಮಾಡುತ್ತಿಲ್ಲ. ಈ ದುಸ್ಥಿತಿಯಿಂದ ನಮ್ಮ ಭಾರತೀಯರು ತಮ್ಮ ನಿಜ ಸಂಸ್ಕೃತಿಯೇನು ಎನ್ನುವುದನ್ನೇ ತಿಳಿಯದೆ, ಇತರ ದೇಶಗಳ ಸಂಪ್ರದಾಯಗಳ ಬೆನ್ನು ಹತ್ತಿ ಉಭಯ ಭ್ರಷ್ಟರಾಗುತ್ತಿದ್ದಾರೆ.

[ಶ್ರೀ ಸತ್ಯಸಾಯಿಬಾಬಾರವರ ಪ್ರವಚನದಿಂದ] (ಪ್ರಭಾತ)

Help The Gorakshana

All India Blind Welfare Week

(Shivo-Chaturdasi Week)

16 th February — 22 nd February 1969

FLAG DAY on 21 st February 1969

— HELP THE HELPLESS BLIND —

Sponsored by :

Netaji Eye & General Hospital

P. O. Ramachandrapur Ashram, Dist. Purulia (W. B)

Protect the Cow

Edited, Printed & Published by Dharmaprachara Niata
M S Krishna Rao (Proprietor) at the Satvavad Press
Chamarrajapuram, Mysoe

ವುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

.... ಮನಮೋಹಕ ಹಿಂದಿ ಚಿತ್ರ ....

ದಿವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯದ
ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 4 ನೇ ವಾರ

— ಅತ್ಯಮೋಘ ತೆಮಿಳು ಚಿತ್ರ —

ಒಳವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 1.